IJCRT.ORG ISSN : 2320-2882

INTERNATIONAL JOURNAL OF CREATIVE RESEARCH THOUGHTS (IJCRT)

An International Open Access, Peer-reviewed, Refereed Journal

# ಭಾರತದಲ್ಲಿ ಸಹಕಾರಾತ್ಮಕ ಸಂಯುಕ್ತ ವ್ಯವಸ್ಥೆ

ಯಲ್ಲಪ್ಪ ಹ. ಭಜಂತ್ರಿ

ಸಂಶೋಧನಾ ವಿದ್ಯಾರ್ಥಿ

ಮಾರ್ಗದರ್ಶಕರು,
ಡಾ. ಎಂ.ಜಿ.ಖಾನ್

ನಿವೃತ್ತ ಪ್ರಾಧ್ಯಾಪಕರು

**ಪೀಠಿಕೆ:**

ಸುಮಾರು ಕ್ರಿ.ಪೂ. ಮೂರನೇ ಶತಮಾನದ ಗ್ರೀಸ್‌ನಲ್ಲಿ ಸಂಯುಕ್ತ ತತ್ವವು ಮೊದಲ ಬಾರಿಗೆ ಪ್ರಚಲಿತವಾದರೂ ಸಂಯುಕ್ತ ಎಂಬ ಇಂಗ್ಲೀಷ್ ಪದವನ್ನು ಕ್ರಿ.ಶ. ೧೬೪೫ ರಲ್ಲಿ ಬಳಸಲಾಯಿತು. ಕ್ರಿ.ಶ. ೧೭೮೭ ರಲ್ಲಿ ಅಮೇರಿಕದ ಸಂಯುಕ್ತ ಪದ್ಧತಿ ಜಾರಿಗೆ ಬಂದ ಮೇಲೆ, ಸಂಯುಕ್ತ ಪದ್ಧತಿ ಸರ್ಕಾರ ವಿಶ್ವದಲ್ಲಿ ಜನಪ್ರಿಯವಾಯಿತು. ಬ್ರಿಟಿಷರು ಈ ಪದ್ಧತಿಯನ್ನು ತಮ್ಮ ದೇಶದಲ್ಲಿ ಅಳವಡಿಸಿಕೊಳ್ಳದೇ ಇದ್ದರೂ ಇದು ಅಮೇರಿಕ, ಆಸ್ಟ್ರೇಲಿಯಾ, ಕೆನಡ ಮತ್ತು ಭಾರತ ಮುಂತಾದ ದೇಶಗಳಲ್ಲಿ ಜನಪ್ರಿಯವಾಗುವಂತೆ ಮಾಡಿದರು. ವೈವಿಧ್ಯತೆ ವ್ಯವಸ್ಥೆಯಿಂದ ಕೂಡಿರುವ ದೇಶಗಳಿಗೆ ಸಂಯುಕ್ತ ವ್ಯವಸ್ಥೆ ಸೂಕ್ತವಾಗಿದೆ.

ಬ್ರಿಟೀಷರ ಆಡಳಿತ ಕಾಲದಲ್ಲಿ ಸರ್ಕಾರಿ ಏಕಾತ್ಮಕ ಪದ್ಧತಿ ಭಾರತದಲ್ಲಿ ಸಮರ್ಪಕವಾಗಿ ಕೆಲಸ ಮಾಡಲಿಲ್ಲ. ವಿವಿಧ ಭಾಷೆಗಳು, ಧರ್ಮಗಳು, ಜನಾಂಗಗಳು ಮತ್ತು ಸಂಪ್ರದಾಯಗಳು, ಇರುವ ವಿಶಾಲ ಭಾರತಕ್ಕೆ ಸಂಯುಕ್ತ ಮಾದರಿಯು ಸೂಕ್ತವೆಂದು ಬ್ರಿಟೀಷರು ಅರಿತು, ಇದನ್ನು ಬೆಂಬಲಿಸಿದರು. ಮೌಂಟ್‌ಫೋರ್ಡ ಹಾಗೂ ಸೈಮನ್ ಸಮಿತಿಯ ವರದಿಗಳು ಮತ್ತು ೧೯೩೦ ರಲ್ಲಿ ನಡೆದ ದುಂಡು ಮೇಜಿನ ಸಮ್ಮೇಳನ ಉಪಸಮಿತಿಗಳು ಸಂಯುಕ್ತ ಪದ್ಧತಿಯನ್ನು ಬೆಂಬಲಿಸಿದ್ದರಿಂದ ಅಂತಿಮವಾಗಿ ೧೯೩೫ ರ ಕಾಯ್ದೆಯಲ್ಲಿ ಈ ಪದ್ಧತಿಯ ಸರ್ಕಾರವನ್ನು ಅಂದು ಕೇಂದ್ರ ಮಟ್ಟದಲ್ಲಿ ಜಾರಿಗೆ ತರದೇ ಇದ್ದರೂ, ಪ್ರಾಂತ್ಯಗಳಲ್ಲಿ ಚುನಾಯಿತ ಸರ್ಕಾರಗಳು ಎಪ್ರೀಲ್ ೧, ೧೯೩೭ ರಿಂದ ಜಾರಿಗೆ ಬರಲು ಸಾಧ್ಯವಾಯಿತು.

ಸಂವಿಧಾನ ರಚನಾ ಸಭೆಯಲ್ಲಿ ಬಹುತೇಕ ಸದಸ್ಯರು ಸಂಯುಕ್ತ ಪದ್ಧತಿಯನ್ನು ಪ್ರತಿಪಾದಿಸಿದರು. ಸಂಯುಕ್ತ ಪದ್ಧತಿಯ ಬಗ್ಗೆ ಭಾರತೀಯರು ಅನುಭವ ಪಡೆದಿರುವುದರಿಂದ ಇದನ್ನು ಎಲ್ಲರೂ ಒಪ್ಪಬೇಕೆಂದು ಎನ್. ವಿ. ಗಾಡ್ಗಿಲ್ ವಾದಿಸಿದರು. ಡಿಶೆಂಬರ್ ೧೩, ೧೯೪೬ ರಂದು ಸಂವಿಧಾನ ರಚನಾ ಸಭೆಯಲ್ಲಿ ನೆಹರು ಮಂಡಿಸಿದ ಧ್ಯೇಯಗಳ ನಿರ್ಣಯ ಕ್ರಮಬದ್ಧ ಸಂಯುಕ್ತ ವ್ಯವಸ್ಥೆಗೆ ಅವಕಾಶ ಮಾಡಿಕೊಟ್ಟಿತು.

ಈ ನಿರ್ಣಯವನ್ನು ಸಂವಿಧಾನ ರಚನಾ ಸಭೆ ಜನೇವರಿ ೨೨, ೧೯೪೭ ರಂದು ಅಂಗೀಕರಿಸಿತು. ಆದರೆ ಉಪಖಂಡದ ವಿಭಜನೆಯ ನಂತರ ಉಂಟಾದ ಕಹಿ ಘಟನೆಗಳು, ವಿವಿಧ ಪ್ರಕಾರಕ ಶಕ್ತಿಗಳ, ಭಯ, ರಾಷ್ಟ್ರವಿರೋಧಿ ಪ್ರಾಂತೀಯತೆ ಹಾಗೂ ಕೋಮುವಾದ ಸಂವಿಧಾನ ರಚನಾಕಾರರ ಮನಸ್ಸನ್ನು ಬದಲಾಯಿಸಿದವು. ಕೇಂದ್ರೀಕೃತ ಸಂಯುಕ್ತ ವ್ಯವಸ್ಥೆಗೆ ಅವಕಾಶ ಮಾಡಿಕೊಟ್ಟಿದ್ದರಿಂದ ೧೯೩೫ರ ಕಾಯ್ದೆಯು ಇವರ ಮೇಲೆ ಪ್ರಭಾವವನ್ನು ಬೀರಿತು. ಕಾಂಗ್ರೆಸ್ ಸದಸ್ಯರು ಹಾಗೂ ಡಾ।। ಬಿ. ಆರ್. ಅಂಬೇಡ್ಕರ ಬಲಿಷ್ಟ ಕೇಂದ್ರ ಸರ್ಕಾರವನ್ನು ಬೆಂಬಲಿಸಿ ಸಮರ್ಥಿಸಿದರು.

**ಸಂಯುಕ್ತ ವ್ಯವಸ್ಥೆಯ ಅರ್ಥ** :

ಸಂಯುಕ್ತ ಸರ್ಕಾರ ಎಂಬ ಪದವು ಆಂಗ್ಲ ಭಾಷೆಯ "ಫೆಡರೇಷನ್" ಎಂಬುದರ ಅನುವಾದವಾಗಿದೆ. ಇದು ಲ್ಯಾಟಿನ್ ಪದವಾದ "ಫೋಡಸ್" ಎಂಬುದರಿಂದ ಬಂದಿದೆ. "ಫೋಡಸ್" ಎಂದರೆ "ಒಪ್ಪಂದ" ಅಥವಾ "ಕರಾರು" ಎಂದರ್ಥ, ಸಂಯುಕ್ತ ಸರ್ಕಾರ ಎಂದರೆ ಹಲವಾರು ರಾಜ್ಯಗಳು ಸೇರಿ ಒಪ್ಪಂದ ಮಾಡಿಕೊಂಡು ಒಂದು ರಾಷ್ಟ ಸಂಘವನ್ನು ರಚಿಸಿಕೊಂಡು ಆಡಳಿತ ನಿರ್ವಹಿಸುವುದಾಗಿರುತ್ತದೆ.

ಒಂದು ರಾಷ್ಟ್ರದ ಎಲ್ಲಾ ಅಧಿಕಾರಗಳನ್ನು ಸಂವಿಧಾನದ ಮೂಲಕ ಕೇಂದ್ರ ಸರ್ಕಾರ ಮತ್ತು ಹಲವು ಪ್ರಾಂತ್ಯ ಸರ್ಕಾರಗಳ ನಡುವೆ ವಿಕೇಂದ್ರೀಕರಿಸಿ, ದ್ವಿ ಸರ್ಕಾರಿ ವ್ಯವಸ್ಥೆಯ ಮೂಲಕ ಆಡಳಿತ ನಡೆಸುವ ಪದ್ಧತಿಯನ್ನು ಸಂಯುಕ್ತ ಸರ್ಕಾರಿ ಪದ್ಧತಿ ಎನ್ನುತ್ತೇವೆ. ಇಲ್ಲಿ ಕೇಂದ್ರ ಮತ್ತು ಪ್ರಾಂತ್ಯ ಸರ್ಕಾರಗಳು ಸಂವಿಧಾನದಿಂದ ಪ್ರದತ್ತವಾದ ಅಧಿಕಾರಗಳನ್ನು ಬಳಸಿಕೊಂಡು ಸ್ವತಂತ್ರವಾಗಿ ಕಾರ್ಯನಿರ್ವಹಿಸಿದವು ಮತ್ತು ಕೇಂದ್ರ ಸರ್ಕಾರ ರಾಜ್ಯಗಳ ಅಧಿಕಾರ ವ್ಯಾಪ್ತಿಯಲ್ಲಿ ಮಧ್ಯೆ ಪ್ರವೇಶಿಸಿ, ಅಧಿಕಾರವನ್ನು ಮೊಟಕು ಮಾಡಲು ಅವಕಾಶ ನೀಡಲಿಲ್ಲ.

**ವ್ಯಾಖ್ಯೆಗಳು**:

೧. ಹ್ಯಾಮಿಲ್ಟನ್–"ಹಲವು ಪ್ರಾಂತ್ಯಗಳ ಸಮ್ಮಿಲನದಿಂದ ರಚನೆಯಾಗುವ ಒಂದು ಹೊಸ ರಾಷ್ಟ್ರದ ವ್ಯವಸ್ಥೆಯೇ ಸಂಯುಕ್ತ ಸರ್ಕಾರ".

೨. ಮಾಂಟೆಸ್ಕೋ–"ಹಲವಾರು ಸಣ್ಣ ರಾಜ್ಯಗಳು ಸಂಪ್ರದಾಯಬದ್ಧವಾಗಿ ಒಪ್ಪಿಕೊಂಡು ದೊಡ್ಡ ರಾಜ್ಯವನ್ನು ರಚಿಸುವುದೇ ಸಂಯುಕ್ತ ವ್ಯವಸ್ಥೆ".

೩. ಕೆ.ಸಿ. ವೀಯರ್ – "ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳ ನಡುವೆ ಸಂವಿಧಾನದ ಅಧಿಕಾರವನ್ನು ವಿಭಜಿಸುವ ಸೂತ್ರವೇ ಸಂಯುಕ್ತ ಸರ್ಕಾರ".

**ಸಂಯುಕ್ತ ಸರ್ಕಾರವು ೨ ರೀತಿಯಲ್ಲಿ ರಚನೆಯಾಗುವದಕ್ಕೆ ಕಾರಣವಾಯಿತು**.

೧. ಹಲವಾರು ಸಣ್ಣಪುಟ್ಟ ಪ್ರಾಂತ್ಯಗಳು ಒಂದು ದೊಡ್ಡ ರಾಷ್ಟ್ರದ ಸದಸ್ಯರಾಗಲು ಒಪ್ಪಿಗೆ ನೀಡಿ, ಆಂತರಿಕ ಪರಮಾಧಿಕಾರವನ್ನು ತಮ್ಮಲ್ಲೇ ಉಳಿಸಿಕೊಂಡು ಬಾಹ್ಯ ಪರಮಾಧಿಕಾರವನ್ನು ಕೇಂದ್ರಕ್ಕೆ ಬಿಟ್ಟುಕೊಡಲು ಒಪ್ಪಿದಾಗ ಸಂಯುಕ್ತ ಸರ್ಕಾರ ರಚನೆಯಾಗುತ್ತದೆ. ಇಲ್ಲಿ ಪ್ರಾಂತ್ಯಗಳು ವಿದೇಶಿ ಆಕ್ರಮಣದಿಂದ ರಕ್ಷಣೆ ಮತ್ತು

ಆರ್ಥಿಕ ದುಃಸ್ಥಿತಿಯಿಂದ ಪಾರಾಗಲು ಇಂತಹ ಒಪ್ಪಂದಗಳಿಗೆ ಒಳಗಾಗುತ್ತವೆ. ಇದನ್ನು "ಏಕತಾಬಲ" ಎನ್ನುತ್ತೇವೆ. ಉದಾ: ಅಮೇರಿಕ, ಆಸ್ಟ್ರೇಲಿಯಾ, ಸ್ವಿಡ್ಜರ್‌ಲ್ಯಾಂಡ್ ಮುಂತಾದವು.

೨. ಒಂದು ದೊಡ್ಡ ರಾಷ್ಟ್ರವನ್ನು ಆಡಳಿತ ನಿರ್ವಹಣೆಯ ಅನುಕೂಲಕ್ಕಾಗಿ ಸಣ್ಣ ಸಣ್ಣ ರಾಜ್ಯಗಳನ್ನಾಗಿ ವಿಂಗಡಿಸಿ ಸಂವಿಧಾನದ ಅಧಿಕಾರಗಳನ್ನು ಕೇಂದ್ರ ಸರ್ಕಾರ ಮತ್ತು ಹಲವು ರಾಜ್ಯ ಸರ್ಕಾರಗಳ ನಡುವೆ ವಿಭಜಿಸಿದಾಗ ಸಂಯುಕ್ತ ಸರ್ಕಾರ ರಚನೆಯಾಗುತ್ತದೆ. ಇಲ್ಲಿ ಸಂಯುಕ್ತ ಸರ್ಕಾರಗಳು ರಚನೆಯಾಗುವ ಮುಖ್ಯ ಉದ್ದೇಶ ಬೃಹತ್ತಾದ ರಾಷ್ಟ್ರದ ವೈವಿಧ್ಯತೆಯಲ್ಲಿ ಏಕತೆಯನ್ನು ತರುವುದಾಗಿರುತ್ತದೆ. ಇದನ್ನು "ಪ್ರತ್ಯೇಕತಾಬಲ" ಎನ್ನುತ್ತೇವೆ. ಉದಾ: ಭಾರತ, ಕೆನಡಾ, ಬ್ರೆಜಿಲ್ ಮುಂತಾದವುಗಳು ಒಳಗೊಂಡಿವೆ.

ಸಂವಿಧಾನದ ೩ನೇ ವಿಧಿಯ ಪ್ರಕಾರ ಸಂಸತ್ತು ರಾಜ್ಯಗಳ ರಚನೆ ಮತ್ತು ಪುನರ್‌ರಚನೆ ಮಾಡುವ ಅಧಿಕಾರ ಹೊಂದಿದೆ. ೧೯೫೦ ರಿಂದ ಈ ವಿಷಯಕ್ಕೆ ಸಂಬಂಧಿಸಿದಂತೆ ಸಂಸತ್ತು ಸುಮಾರು ೧೯ ಕಾಯ್ದೆಗಳನ್ನು ಅಂಗೀಕರಿಸಿದೆ. ಭಾರತದ ಒಕ್ಕೂಟವನ್ನು ಅಳಿಸಿ ಹಾಕಬಹುದಾದ ರಾಜ್ಯಗಳನ್ನೊಳಗೊಂಡಿರುವ ಅವಿನಾಶ ಒಕ್ಕೂಟ ಎಂದು ಕರೆಯಬಹುದು. ಏಕಪೌರತ್ವ, ಏಕೀಕೃತ ನ್ಯಾಯಾಂಗ ವ್ಯವಸ್ಥೆ, ಅಖಿಲ ಭಾರತ ಸೇವೆಗಳು, ಕೇಂದ್ರದಿಂದ ರಾಜ್ಯಪಾಲರ ನೇಮಕ, ತುರ್ತುಪರಿಸ್ಥಿತಿ, ಅಧಿಕಾರಗಳು, ಕೇಂದ್ರ ಮತ್ತು ರಾಜ್ಯಗಳಿಗೆ ಏಕಸಂವಿಧಾನ ಮತ್ತು ಸಂವಿಧಾನವನ್ನು ತಿದ್ದುಪಡಿ ಮಾಡಲು ಸಂಸತ್ತಿಗೆ ಇರುವ ಏಕಪಕ್ಷೀಯ ಅಧಿಕಾರ ಮುಂತಾದ ನಿಯಮಗಳು ಕೇಂದ್ರ ಸರ್ಕಾರದ ಹೆಚ್ಚು ಅಧಿಕಾರಗಳನ್ನು ಪ್ರತಿಬಿಂಬಿಸುತ್ತವೆ. ಡಾ। ಬಿ.ಆರ್. ಅಂಬೇಡ್ಕರ ಹೇಳಿರುವಂತೆ ವಿಶೇಷ ಸಂದರ್ಭಗಳಲ್ಲಿ ಏಕಾತ್ಮಕ ಪದ್ಧತಿಯಂತೆ ಮತ್ತು ಸಾಮಾನ್ಯ ಸಂದರ್ಭಗಳಲ್ಲಿ ಸಂಯುಕ್ತ ಪದ್ಧತಿಯಂತೆ ಕಂಡುಬರುತ್ತದೆ. ಯೋಜನಾ ಪದ್ಧತಿಯೂ ಕೇಂದ್ರಿಕೃತ ಸಂಯುಕ್ತ ಪದ್ಧತಿಗೆ ಕಾರಣವಾಗಿದೆ.

ಭಾರತದ ಸಂಯುಕ್ತ ಪದ್ಧತಿಯಲ್ಲಿ ರಾಜ್ಯಗಳ ಮತ್ತು ಅವುಗಳ ಸರ್ಕಾರಗಳ ಅಳಿವು – ಉಳಿವು ಕೇಂದ್ರ ಸರ್ಕಾರದ ನಿಯಂತ್ರಣಕ್ಕೆ ಹಾಗೂ ಅನುಮತಿಗೆ ಒಳಗಾಗಿವೆ. ಇಂಥ ವ್ಯವಸ್ಥೆಯನ್ನು ಪ್ರಿಫೆಕ್ಟೋರಿಯಲ್ ಮಾದರಿ ಎಂದು ಕರೆಯಬಹುದು. ಕೆ.ಸಿ. ವೀಯರ್: "ಭಾರತ ಸಹಾಯಕ ಸಂಯುಕ್ತ ಲಕ್ಷಣಗಳನ್ನು ಒಳಗೊಂಡಿರುವ ಏಕಾತ್ಮಕ ರಾಜ್ಯವೇ ಹೊರತು, ಸಹಾಯಕ ಏಕಾತ್ಮಕ ಲಕ್ಷಣಗಳನ್ನು ಒಳಗೊಂಡಿರುವ ಸಂಯುಕ್ತ ರಾಷ್ಟ್ರವಲ್ಲ". ಅಲ್ಲದೇ ಇದನ್ನು ಅರೆಫೆಡರಲ್ ಪದ್ಧತಿ ಎಂದು ಕರೆದಿದ್ದಾರೆ. ಆದರೆ ಗ್ರಾನ್‌ವಿಲ್ಲ್ ಆಸ್ಟಿನ್ ಪ್ರಕಾರ ಇದು ಸಹಕಾರ ಸಂಯುಕ್ತ ಪದ್ಧತಿಯಾಗಿದೆ.

## ಭಾರತದ ಸಂಯುಕ್ತ ಪದ್ಧತಿಯ ಸ್ವರೂಪ

ಜವಾಹರಲಾಲ್ ನೆಹರು ನೇತೃತ್ವದ ಕೇಂದ್ರ ಸಂವಿಧಾನ ಸಮಿತಿ ಹೆಚ್ಚು ಅಧಿಕಾರವುಳ್ಳ ಕೇಂದ್ರ ಸರ್ಕಾರವನ್ನು ಪ್ರತಿಪಾದಿಸಿದರೂ, ಫೆಡರೇಶನ್ ಪದವನ್ನು ಸೇರಿಸಲು ಇಚ್ಛಿಸಿತು. ಸಂವಿಧಾನದಲ್ಲಿ ಫೆಡರಲ್ ಪದವನ್ನು ಸೇರಿಸುವಂತೆ ಕೆ.ಟಿ.ಷಾ ಕೂಡ ವಾದಿಸಿದರು. ೧೯೪೭ರ ಅಕ್ಟೋಬರ್‌ನಲ್ಲಿ ಬಿ.ಎನ್. ರಾವ್ ಸಿದ್ಧಪಡಿಸಿದ್ದ ಕರಡು ಸಂವಿಧಾನವನ್ನು ಸಂಯುಕ್ತ ಸಂವಿಧಾನವೆಂದು ಕರೆಯಲಾಗಿತ್ತು.

ಸಂವಿಧಾನದ ಯಾವ ಭಾಗದಲ್ಲೂ ಸಂಯುಕ್ತ ಪದವನ್ನು ಬಳಸದೇ ಇದ್ದರೂ, ಕೆಲವು ಸಂಯುಕ್ತ ತತ್ವಗಳನ್ನು ಕಾಣುತ್ತೇವೆ. ಅವುಗಳೆಂದರೆ,

೧. ಲಿಖಿತ ಸಂವಿಧಾನ

೨. ಅಧಿಕಾರ'ಗಳ ಹಂಚಿಕೆ

೩. ಕೇಂದ್ರ ಮತ್ತು ರಾಜ್ಯಗಳಿಗೆ ಪ್ರತ್ಯೇಕ ಆಡಳಿತ ಸೇವೆಗಳು.

೪. ರಾಜ್ಯಗಳನ್ನು ಪ್ರತಿನಿಧಿಸುವ ರಾಜ್ಯಸಭೆ ಆಡಳಿತ ಸೇವೆಗಳು.

ಸಂವಿಧಾನವನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ ಕೇಂದ್ರ ಸರ್ಕಾರಕ್ಕೆ ಹೆಚ್ಚು ಹಾಗೂ ವಿಶೇಷ ಅಧಿಕಾರವನ್ನು ನೀಡಿರುವುದು ಕಂಡು ಬರುತ್ತದೆ. ಸಂವಿಧಾನದ ೭ನೇ ಅನುಸೂಚಿಯಲ್ಲಿ ಕೇಂದ್ರಪಟ್ಟಿ, ರಾಜ್ಯಪಟ್ಟಿ ಮತ್ತು ಸಮವರ್ತಿ ಪಟ್ಟಿಗಳಲ್ಲಿ ಅಧಿಕಾರ ಹಂಚಿಕೆಯಾಗಿದೆ. ಕೇಂದ್ರ ಪಟ್ಟಿಯಲ್ಲಿ ೯೯ ವಿಷಯಗಳು, ರಾಜ್ಯಪಟ್ಟಿಯಲ್ಲಿ ೬೧ ವಿಷಯಗಳು ಮತ್ತು ಸಮವರ್ತಿ ಪಟ್ಟಿಯಲ್ಲಿ ೫೨ ವಿಷಯಗಳು ಇರುತ್ತವೆ.

## ಸಂಯುಕ್ತ ಸರ್ಕಾರದ ಲಕ್ಷಣಗಳು

### ೧. ಅಧಿಕಾರ ವಿಭಜನೆ

ಸಂಯುಕ್ತ ಸರ್ಕಾರ ಪದ್ದತಿಯಲ್ಲಿ ಅಧಿಕಾರಗಳನ್ನು ಕೇಂದ್ರ ಮತ್ತು ರಾಜ್ಯಗಳ ನಡುವೆ ಸಂವಿಧಾನಬದ್ಧವಾಗಿ ವಿಭಜಿಸಲಾಗಿರುತ್ತದೆ. ಇವೆರಡೂ ಸರ್ಕಾರಗಳು ಸ್ವತಂತ್ರವಾಗಿ ತಮ್ಮ ತಮ್ಮ ಕಾರ್ಯಕ್ಷೇತ್ರ ವ್ಯಾಪ್ತಿಯಲ್ಲಿ ಅಧಿಕಾರವನ್ನು ಚಲಾಯಿಸುತ್ತವೆ. ಇಲ್ಲಿ ರಾಷ್ಟ್ರೀಯ ಮತ್ತು ಅಂತರ್‌ರಾಷ್ಟ್ರೀಯ ಪ್ರಾಮುಖ್ಯತೆ ಪಡೆದ ವಿಷಯಗಳ ಮೇಲೆ ಕೇಂದ್ರ ಸರ್ಕಾರವು ಅಧಿಕಾರ ಪಡೆದರೆ ಪ್ರಾಂತೀಯ ಮತ್ತು ಸ್ಥಳೀಯ ವಿಷಯಗಳ ಮೇಲೆ ರಾಜ್ಯ ಸರ್ಕಾರ ಅಧಿಕಾರ ಪಡೆದಿರುತ್ತದೆ.

### ೨. ದ್ವಿ ಸರ್ಕಾರ ವ್ಯವಸ್ಥೆ

ಸಂಯುಕ್ತ ಸರ್ಕಾರಿ ವ್ಯವಸ್ಥೆಯಲ್ಲಿ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳೆಂಬ ದ್ವಿ ಸರ್ಕಾರಿ ವ್ಯವಸ್ಥೆ ಇರುತ್ತದೆ. ಇವೆರಡೂ ಸರ್ಕಾರಗಳು ಚಲಾಯಿಸುವ ಅಧಿಕಾರಗಳು ಸಂವಿಧಾನದಿಂದ ಪ್ರದತ್ತವಾಗಿದ್ದು, ತಮ್ಮ ತಮ್ಮ ಪರಿಮಿತಿಯಲ್ಲಿ ಸ್ವತಂತ್ರವಾಗಿ ಶಾಸನ ರಚಿಸಿ, ಕಾರ್ಯಗತಕ್ಕೆ ತರುತ್ತವೆ ಮತ್ತು ಆಡಳಿತವನ್ನು ನಿರ್ವಹಿಸುತ್ತವೆ.

### ೩. ಲಿಖಿತ ಮತ್ತು ಅನಮ್ಯ ಸಂವಿಧಾನ

ಸಂಯುಕ್ತ ಸರ್ಕಾರಗಳು ಕಡ್ಡಾಯವಾಗಿ ಲಿಖಿತ ಮತ್ತು ಅನಮ್ಯ ಸಂವಿಧಾನಗಳನ್ನು ಅಳವಡಿಸಿಕೊಂಡಿರಬೇಕು. ಇಲ್ಲಿ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳ ಪರಿಮಿತಿಯಲ್ಲಿ ಬರುವ ಅಧಿಕಾರವನ್ನು ಮತ್ತು ಮಿತಿಗಳನ್ನು ಸ್ಪಷ್ಟವಾಗಿ ನಿರೂಪಿಸಲು ಲಿಖಿತ ಸಂವಿಧಾನ ಅಗತ್ಯವಿದೆ. ಯಾವುದೇ ಸನ್ನಿವೇಶದಲ್ಲಿ ಕೇಂದ್ರ ಸರ್ಕಾರವು ರಾಜ್ಯ ಸರ್ಕಾರದ ಕಾರ್ಯಕ್ಷೇತ್ರ ವ್ಯಾಪ್ತಿಯಲ್ಲಿ ಹಸ್ತಕ್ಷೇಪ ಮಾಡಿ, ಅವುಗಳ ಅಧಿಕಾರವನ್ನು ಮೊಟಕುಗೊಳಿಸಬಾರದು ಮತ್ತು ರಾಜ್ಯ ಸರ್ಕಾರಗಳಿಗೆ ಅನ್ಯಾಯವಾಗುವ ರೀತಿಯಲ್ಲಿ ಸಂವಿಧಾನವನ್ನು ಸುಲಭವಾಗಿ ತಿದ್ದುಪಡಿ ಮಾಡುವುದನ್ನು ತಪ್ಪಿಸಲು ಕಠಿಣ ಸಂವಿಧಾನವು ಅಗತ್ಯವಾಗಿರುತ್ತದೆ.

**೪. ಸಂವಿಧಾನದ ಶ್ರೇಷ್ಠತೆ**

ಸಂಯುಕ್ತ ಸರ್ಕಾರದ ಪದ್ಧತಿಯಲ್ಲಿ ಸಂವಿಧಾನವು ಶ್ರೇಷ್ಠತೆಯನ್ನು ಪಡೆದಿದೆ. ಪರಮಾಧಿಕಾರವು ಕೇಂದ್ರ ಸರ್ಕಾರಕ್ಕೂ ಸೇರದೇ, ರಾಜ್ಯ ಸರ್ಕಾರಕ್ಕೂ ಸೇರದೆ ಸಂವಿಧಾನಕ್ಕೆ ಸೇರಿರುತ್ತದೆ. ಈ ವ್ಯವಸ್ಥೆಯಲ್ಲಿ ಎಲ್ಲಾ ಅಧಿಕಾರಗಳೂ ಸಂವಿಧಾನದಿಂದ ನಿರ್ಧರಿಸಲ್ಪಟ್ಟು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಂವಿಧಾನದ ವಿಧಿ ವಿಧಾನಗಳಿಗೆ ಅನುಗುಣವಾಗಿ ನಡೆಸಬೇಕು.

**೫. ದ್ವಿಸದನ ಶಾಸಕಾಂಗ ಪದ್ಧತಿ**

ಸಂಯುಕ್ತ ಸರ್ಕಾರ ಪದ್ಧತಿಯಲ್ಲಿ ಶಾಸಕಾಂಗವು ದ್ವಿಸದನ ವ್ಯವಸ್ಥೆಯಿಂದ ಕೂಡಿರಬೇಕು. ಶಾಸಕಾಂಗದ ಕೆಳಸದನದ ಸದಸ್ಯರು ಜನಗಳಿಂದ ನೇರವಾಗಿ ಆಯ್ಕೆಯಾಗಿ ಇಡೀ ರಾಷ್ಟ್ರವನ್ನು ಪ್ರತಿನಿಧಿಸಿದರೆ, ಮೇಲ್ಮನೆ ಸದಸ್ಯರು ರಾಜ್ಯಗಳ ಜನಪ್ರತಿನಿಧಿಗಳಿಂದ ಆಯ್ಕೆಯಾಗಿ ರಾಜ್ಯದ ಹಿತಾಸಕ್ತಿಗಳನ್ನು ಕಾಪಾಡುವರು.

**೬. ವಿಶೇಷ ಮತ್ತು ಸ್ವತಂತ್ರ್ಯ ನ್ಯಾಯಾಂಗ**

ಸಂಯುಕ್ತ ಸರ್ಕಾರ ಪದ್ಧತಿಯಲ್ಲಿ ವಿಶೇಷ ಮತ್ತು ಸ್ವತಂತ್ರ ನ್ಯಾಯಾಂಗ ಅತ್ಯವಶ್ಯಕ. ಏಕೆಂದರೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಮಾಡಿದ ಕಾನೂನುಗಳ ಸಂವಿಧಾನಬದ್ಧತೆಯನ್ನು ಪರೀಕ್ಷಿಸಲು ಅಲ್ಲಿ ವಿಶೇಷ ನ್ಯಾಯಾಲಯ ಅಗತ್ಯ. ಈ ವ್ಯವಸ್ಥೆಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವೆ ಅಧಿಕಾರ ವಿಭಜನೆಯಾಗಿರುವುದರಿಂದ ಇವೆರಡರ ನಡುವೆ ಶಾಸನೀಯ, ಆರ್ಥಿಕ ಮತ್ತು ಆಡಳಿತಾತ್ಮಕ ವಿವಾದಗಳು ಉದ್ಭವವಾದಾಗ ಯಾವುದೇ ಒತ್ತಡಕ್ಕೆ, ಪ್ರಭಾವಕ್ಕೆ ಮಣಿಯದೆ ಪ್ರಾಮಾಣಿಕವಾಗಿ ತೀರ್ಪು ನೀಡಿ ಯಶಸ್ವಿ ಒಕ್ಕೂಟ ರಚನೆ ಮಾಡಿಕೊಳ್ಳುವಲ್ಲಿ ಸಹಕಾರಿಯಾಗುವ ಸ್ವತಂತ್ರ ನ್ಯಾಯಾಂಗ ವ್ಯವಸ್ಥೆ ಅತ್ಯಗತ್ಯ.

**೭. ಪ್ರತ್ಯೇಕತೆ:**

ಸಂಯುಕ್ತ ಸರ್ಕಾರ ವ್ಯವಸ್ಥೆಯು ಯಶಸ್ವಿಯಾಗಿ ಮತ್ತು ಪರಿಣಾಮಕಾರಿಯಾಗಿ ಕಾರ್ಯನಿರ್ವಹಣೆ ಮಾಡಬೇಕಾದರೆ ಅಲ್ಲಿ ರಾಜ್ಯಗಳಿಗೆ ಪ್ರತ್ಯೇಕ ಪೌರತ್ವ, ಪ್ರತ್ಯೇಕ ಸಂವಿಧಾನ, ಪ್ರತ್ಯೇಕ ನ್ಯಾಯಾಲಯ, ಪ್ರತ್ಯೇಕ ಆಡಳಿತ ವ್ಯವಸ್ಥೆ ಅಗತ್ಯ. ಈ ನಿಟ್ಟಿನಲ್ಲಿ ಅಮೇರಿಕ ಮತ್ತು ಸ್ವಿಡ್ಜರ್‌ಲ್ಯಾಂಡ್ ದೇಶಗಳಲ್ಲಿ ದ್ವಿಪೌರತ್ವವಿದೆ. ಅಮೇರಿಕದಲ್ಲಿ ರಾಷ್ಟ್ರಕ್ಕೆ ಒಂದು ಮತ್ತು ಪ್ರಾಂತ್ಯಗಳಿಗೆ ಪ್ರತ್ಯೇಕ ಸಂವಿಧಾನಗಳಿವೆ.

**ಉಪಸಂಹಾರ** :

ಬೃಹತ್ ರಾಷ್ಟ್ರವಾಗಿರುವ ಭಾರತಕ್ಕೆ ನೈಜವಾದ ಸಂಯುಕ್ತ ಪದ್ಧತಿ ಅಗತ್ಯವಾಗಿದೆ. ಸಮಾಜ ವಿಭಿನ್ನ ಹಿತಾಸಕ್ತಿಗಳನ್ನು ಸ್ಪಷ್ಟವಾಗಿ ಅರಿತು, ರಕ್ಷಿಸಲು ಸಂಯುಕ್ತ ಸರ್ಕಾರ ಉಪಯುಕ್ತವಾಗಿದೆಯೆಂದು ವಿಲಿಯಂ ಎಸ್, ಲಿವಿಂಗ್‌ಸ್ಟನ್ ಹೇಳಿರುವುದರಲ್ಲಿ ಸತ್ಯವಿದೆ. ನೈಜವಾದ ಸಂಯುಕ್ತ ವ್ಯವಸ್ಥೆಯಲ್ಲಿ ರಾಷ್ಟ್ರದ ಏಕತೆ ಮತ್ತು ಸಮಗ್ರತೆಯನ್ನು ಕಾಪಾಡಿ, ಆರ್ಥಿಕ ಪ್ರಗತಿಯನ್ನು ಸಾಧಿಸಬಹುದಾಗಿದೆ.

**ಆಧಾರ ಗ್ರಂಥಗಳು** :

೧. ಪ್ರೋ.ಎಚ್.ಹೆಮ್.ರಾಜಶೇಖರ
ಭಾರತ ಸರ್ಕಾರ ಮತ್ತು ರಾಜಕೀಯ, ಕಿರಣ್ ಪ್ರಕಾಶನ, ಮೈಸೂರು, ೨೦೦೯.

೨. ಲಾರೆನ್ಸ್ ಸೇಜ್,
ಫೆಡರೇಶನ್ ವಿದೌಟ್ ಎ ಸೆಂಟರ್. ದ ಇಂಪ್ಯಾಕ್ಟ್ ಆಫ್ ಪೊಲಿಟಿಕಲ್ & ಎಕಾನಾಮಿಕ್ ರಿಫಾರ್ಮ ಇಂಡಿಯಾಸ್ ಫೆಡರಲ್ ಸಿಸ್ಟಮ್. ನ್ಯೂ ಡೆಲ್ಲಿ, ಸೇಜ್–೨೦೦೨.

೩. ಡಾ.ಚಂದ್ರಪಾಲ್, ದೀಪ ಮತ್ತು ದೀಪ ಪಬ್ಲಿಕೇಷನ್, ನ್ಯೂಡೆಲ್ಲಿ, ೧೯೮೩.
ಸೆಂಟರ್ ಸ್ಟೇಟ್ ರಿಲೇಶನ್ಸ್ & ಕೋ–ಅಪರೇಟಿವ್ ಫೆಡರ್ಯಾಲಿಸಮ್.